ಹೈಕೋರ್ಟಿನಲ್ಲಿ ಅನೇಕ ಅರ್ಜಿಗಳು ಪೆಂಡಿಂಗ್ ಇವೆ. ಸರ್ಕಾರ ಇದರ ಬಗ್ಗೆ ಒಂದು ಪಾಲಿಸಿಯನ್ನು ಮಾಡಿ ಎಷ್ಟು ಕೋಟಾ ಕೊಡುತ್ತದೆ, ಎಷ್ಟು ಕೊಡಬಹುದು ಎಂದು ಇದರ ಬಗ್ಗೆ ಒಂದು ಸರ್ವೆ ಕೂಡ ನಡೆಸಿ ಸರ್ಕಾರದ ಮುಂದೆ ಪ್ರಸ್ತಾವನೆ ಬಂದಿದೆಯೆಂದು ನಾನು ಹೇಳಿದ್ದೇನೆ. ಇದರಲ್ಲಿ ನಾವು ಯಾವ ಕೆಟ್ಟ ಉದ್ದೇಶವನ್ನು ಕೂಡ ಇಟ್ಟುಕೊಂಡಿಲ್ಲ ಅಥವಾ ಪಂಚಾಯ್ತಿ ಕಟ್ಟೆಯಲ್ಲಿ ಮಧ್ಯದ ಅಂಗಡಿಗಳನ್ನು ಕೊಡಬೇಕೆಂದು ಕೂಡ ಇಲ್ಲ. ನಾವು ಒಂದು ಪ್ರದೇಶದಲ್ಲಿ ಜನಸಂಖ್ಯೆ ಆಧಾರದ ಮೇಲೆ ಮತ್ತು ಸಾಮಾನ್ಯ ಬೇಡಿಕೆ ಏನಿರುತ್ತದೆ, ಅದರಂತೆ ನಾವು ಲೈಸೆನ್ಸ್ ಕೊಡದೇ ಇದ್ದರೆ ಅಲ್ಲಿ ಅನೇಕ ದುಷ್ಕೃತ್ಯಗಳು ನಡೆಯುವುದಕ್ಕೆ ಸಾಧ್ಯತೆ ಇರುತ್ತದೆ. ಕಲಬೆರಕೆ ಮದ್ಯದ ಮಾರಾಟ ಅಥವಾ ಆರೋಗ್ಯಹಾನಿಯ ಘಟನೆಗಳು ಸಂಭವಿಸಬಹುದು. ಆದ್ದರಿಂದ ಎಲ್ಲೆಲ್ಲಿ ಸಂಭವನೀಯ ಬೇಡಿಕೆ ಇದೆ ಮತ್ತು ಎಲ್ಲಿಕೊಡಬೇಕೆಂದು ಇದರ ಬಗ್ಗೆ ಗಂಭೀರವಾದ ಚಿಂತನೆಯನ್ನು ಸರ್ಕಾರ ಮಾಡುತ್ತಿದೆ. ಇದರ ಬಗ್ಗೆ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರತಕ್ಕ ಪೊಲೀಸ್ ಸಿಬ್ಬಂದಿ ಮತ್ತು ಭರ್ತಿಮಾಡುವ ಬಗ್ಗೆ

445 (4042) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿರುವ ಸಿವಿಲ್ ಪೊಲೀಸ್, ಮುಖ್ಯ ಪೇದೆಗಳ ಹಾಗೂ ಪೊಲೀಸ್ ಪೇದೆಗಳ ಪೊಲೀಸ್ ಠಾಣೆಗಳ ಹಾಗೂ ಹೊರ ಠಾಣೆಗಳ ಸಂಖ್ಯೆ ಎಷ್ಟು

ಆ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ಯಾವುದಾದರೂ ಪೊಲೀಸ್ ಠಾಣೆ ಹಾಗೂ ಹೊರ ಠಾಣೆಗಳನ್ನು ತೆರೆಯುವ ಪ್ರಸ್ತಾವನೆ ಇದೆಯೇ, ಪ್ರಸ್ತಾವನೆ ಇದ್ದಲ್ಲಿ ವಿವರಗಳೇನು?

ಇ) ಹಾಲಿ ಇರುವ ಪೊಲೀಸ್ ಮುಖ್ಯ ಪೇದೆ ಮತ್ತು ಪೇದೆಗಳ ಸಂಖ್ಯೆ ಹೆಚ್ಚಿಸುವ ಅವಶ್ಯಕತೆಯನ್ನು ಸರ್ಕಾರವು ಮನಗೊಂಡಿದೆಯೇ

ಈ) ಮನಗೊಂಡಿರದ್ದಲ್ಲಿ ಸರ್ಕಾರವು ಈ ಬಗೆಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) 1) ಸಿವಿಲ್ ಪೊಲೀಸ್ ಮುಖ್ಯ ಪೇದೆಗಳು – 242

2) ಸಿವಿಲ್ ಪೊಲೀಸ್ ಪೇದೆಗಳು – 737

ಪೊಲಿಸ್ ಮತ್ತು ಹೊರ ಠಾಣೆಗಳ ಸಂಖ್ಯೆ

1) ಪೊಲೀಸ್ ಠಾಣೆಗಳ ಸಂಖ್ಯೆ – 27

2) ಹೊರ ಠಾಣೆಗಳ ಸಂಖ್ಯೆ – 12

ಆ) ಪ್ರಸ್ತಾವನೆಗಳು ಇದ್ದು, ಇಲಾಖೆಯ ಪರಿಶೀಲನೆಯಲ್ಲಿರುತ್ತವೆ.

ಇ) ಹೌದು

ಈ) ಹುದ್ದೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಪೊಲೀಸ್ ಠಾಣೆಗಳು ಮತ್ತು ಹೊರ ಠಾಣೆಗಳು 39 ಸಂಖ್ಯೆಯಲ್ಲಿದ್ದು ಈ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಮುಖ್ಯಪೇದೆ ಮತ್ತು ಪೇದೆಗಳ ಸಂಖ್ಯೆ 980 ಇದ್ದು ಅವರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಪೊಲೀಸ್ ಠಾಣೆಗಳಿಗೆ ಅನುಗುಣವಾಗಿ ಪೊಲೀಸರ ಸಂಖ್ಯೆ ಇದೆಯೇ ಎನ್ನತಕ್ಕಂಥಾದ್ದನ್ನು ನಾನಾದರೂ ಕೂಡ ತಿಳಿದುಕೊಳ್ಳುವುದಕ್ಕೆ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಈಗ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ನಾವು ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟಿದ್ದೇವೆ. ಆದರೆ ಕೆಲವು ನಿವೃತ್ತಿಯಾದಂಥ ಹುದ್ದೆಗಳು ಇವೆ ಮತ್ತು ಕೆಲವು ಪೊಲೀಸ್ ಠಾಣೆಗಳಲ್ಲಿ ಕಾನ್‌ಸ್ಟೇಬಲ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎನ್ನತಕ್ಕಂಥ ಬೇಡಿಕೆ ಇದೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಏಕೆಂದರೆ ಇದು ಆರ್ಥಿಕ ಹೊರೆ ಬೀಳುವುದರಿಂದ ಈಗ ಹೆಚ್ಚು ಕಾನ್‌ಸ್ಟೇಬಲ್‌ಗಳನ್ನು ರೂರಲ್ ಏರಿಯಾದಲ್ಲಿ ಕೊಡಬೇಕು. ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ನಮಗೆ ಇರತಕ್ಕಂಥ ನಾರ್ಮ್ಸ್ ಪ್ರಕಾರ ಎಷ್ಟು ಕೊಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಕೂಡ ನಾವು ಪುನರ್‌ಪರಿಶೀಲನೆ ಮಾಡತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ ಎಲ್ಲೆಲ್ಲಿ ಹುದ್ದೆಗಳು ಇವೆ. ಆ ಹುದ್ದೆಗಳನ್ನು ಜಿಲ್ಲಾವಾರು ಭರ್ತಿ ಮಾಡುವುದಕ್ಕೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ ಮತ್ತು ಪ್ರತಿಜಿಲ್ಲೆಯಲ್ಲಿ ಆ ಹುದ್ದೆಗಳನ್ನು ಭರ್ತಿಮಾಡುತ್ತೇವೆ ಹಾಗೂ ಪೊಲೀಸ್ ಠಾಣೆಗಳಲ್ಲಿ ಇನ್ನುಮುಂದೆ ಆ ಕೊರತೆ ಇರುವುದಿಲ್ಲ. ಎರಡನೇಯದಾಗಿ ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವಂಥ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗ ಸಧ್ಯಕ್ಕೆ ಯಾವುದೇ ಹೊಸ ಪೊಲೀಸ್ ಠಾಣೆಗಳನ್ನು ತೆಗೆಯತಕ್ಕಂಥ ವಿಚಾರ ಇಲ್ಲ. ಏನಾದರೂ ಹೊಸ ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡಬೇಕು ಅಂತ ಬಂದಾಗ ಅವಶ್ಯಕತೆಗೆ ಅನುಸಾರವಾಗಿ ಅಲ್ಲಿ ನಾವು ಕೊಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ :– ನಮ್ಮ ಮಂಡ್ಯ ಜಿಲ್ಲೆ ಬಹಳ ವಿಶೇಷವಾಗಿದೆ. ಅಲ್ಲಿ ರಾಜ್ಯ ಹೆದ್ದಾರಿಯಿದ್ದು ಅನೇಕ ಪ್ರತಿಷ್ಠಿತ ಗಣ್ಯ ಅತಿಥಿಗಳು ಆ ರಾಜ್ಯ ಹೆದ್ದಾರಿಗಳ ಪರಿಮಿತಿಯಲ್ಲಿ ಹಾದುಹೋಗುತ್ತಾರೆ. ನಮ್ಮಲ್ಲಿ ವಿ.ಐ.ಪಿಗಳು ಬಂದಾಗ ಪೊಲೀಸ್ ಇಲಾಖೆಯಲ್ಲಿ ವಿಶೇಷವಾಗಿ ಕಾರ್ಯವನ್ನು ನಿರ್ವಹಿಸಬೇಕಾದ ಅವಶ್ಯಕತೆ ಪ್ರತಿದಿನ ಇರುತ್ತದೆ. ಆದ್ದರಿಂದ ತಾವು ತುರ್ತಾಗಿ ನಮ್ಮಲ್ಲಿ ಇರತಕ್ಕಂಥ ಪೊಲೀಸ್ ಫೋರ್ಸ್‌ನ್ನು ಆಗ್ಮೆಂಟ್ ಮಾಡಬೇಕೆಂದು ತಮ್ಮಲ್ಲಿ ನಾನು ಕೋರಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಆತ್ಮಾನಂದ ಅವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಏಕೆಂದರೆ ಪೊಲೀಸರಿಗೆ ಹೆಚ್ಚಿನ ರೀತಿಯಲ್ಲಿ ಸೆಕ್ಯುರಿಟಿಯನ್ನು ಗಣ್ಯರಿಗೆ ಕೊಡತಕ್ಕಂಥ ಒತ್ತಡ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಜಾಸ್ತಿ ಇರುತ್ತದೆ. ಅದೇರೀತಿಯಾಗಿ ಈ ಕಡೆಗೆ ಹೋದರೆ ಕೋಲಾರ ಜಿಲ್ಲೆಯಲ್ಲೂ ಜಾಸ್ತಿ ಇದೆ. ಕಾರಣ ಏನೆಂದರೆ ಅನೇಕ ವಿ.ಐ.ಪಿ.ಗಳು ತಿರುಪತಿಗೆ ಹೋಗುವುದಕ್ಕೆ ಮತ್ತು ಪುಟ್ಟಪರ್ತಿಗೆ ಹೋಗುವುದಕ್ಕೆ ಈ ಮಾರ್ಗವನ್ನು ಆಯ್ಕೆಮಾಡಿಕೊಂಡು ಇದರ ಮೂಲಕ ಪ್ರಯಾಣ ಮಾಡುತ್ತಾರೆ. ಆ ಕಡೆ ಆ ಭಾಗದಲ್ಲಿ ಊಟಿಗೆ ಹೋಗುವಂಥಾದ್ದು ಇದ್ದು ಹೆಚ್ಚು ಸಂಖ್ಯೆಯಲ್ಲಿ ವಿ.ಐ.ಪಿ.ಗಳು ಆ ಮಾರ್ಗದಲ್ಲಿ ಪ್ರಯಾಣ ಮಾಡುತ್ತಾರೆ. ಅದಕ್ಕಾಗಿ ಆಗ್ಮೆಂಟೇಶನ್ ಮಾಡಬೇಕು ಎನ್ನುವುದರಲ್ಲಿ ನಮ್ಮ ಒಪ್ಪಿಗೆ ಕೂಡ ಇದೆ. ಆದರೆ ಇದನ್ನು ಹತಹಂತವಾಗಿ ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಈ ಹಿಂದೆ ನಾವು ಸುಮಾರು ನೂರೆಂಟು ಪೊಲೀಸ್ ಠಾಣೆಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಇನ್ನು ಉಳಿದಂಥ ಪೊಲೀಸ್ ಠಾಣೆಗಳನ್ನು ಕೂಡ ಹಂತಹಂತವಾಗಿ ಸಲ್ಪ ಬಲವರ್ಧನೆ ಮಾಡುತ್ತೇವೆ ಮತ್ತು ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಖಂಡಿತವಾಗಿ ಅಂತಹ ಕಡೆ ವಿಶೇಷವಾದಂಥ ಗಮನಹರಿಸಿ ಪುನರ್ ಪರಿಶೀಲನೆ

ಮಾಡಿ ಮತ್ತು ಆರ್ಥಿಕ ಇಲಾಖೆಯ ಜೊತೆಯಲ್ಲಿ ಚರ್ಚೆಮಾಡಿ ಎಲ್ಲಿ ಅವಶ್ಯಕತೆ ಇದೆ ಅಂಥಾದನ್ನು ಕನ್ಸಿಡರ್ ಮಾಡುವುದಕ್ಕೆ ಪುನಃ ಪ್ರಯತ್ನ ಮಾಡುತ್ತೇವೆ.

ಹೊನ್ನಾವರ ತಾಲ್ಲೂಕಿನ ಏತ ನೀರಾವರಿ ಯೋಜನೆಗಳ ಪ್ರಗತಿ

446 (4002) : ಶ್ರೀ ನಾಯಕ ಜೆ.ಡಿ. (ಭಟ್ಕಳ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳ ವಿವರ ಒದಗಿಸುವುದು;

ಆ) ಹೊನ್ನಾವರ ತಾಲ್ಲೂಕಿನ ಏತ ನೀರಾವರಿ ಯೋಜನೆಗಳಾದ ಉಳ್ಳಂಕಿ, ಮಾವಿನಕುರ್ವೆ, ಚಲವಳ್ಳಿ ಹಾಗೂ ಚಿಕ್ಕನಕೋಡ ಯಾವ ಹಂತದಲ್ಲಿ ಇದೆ, ವರದಿ ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಭಟ್ಕಳ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ರೂ: 163.18 ಲಕ್ಷ ಅಂದಾಜಿನ 12 ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ರೂ: 83.97 ಲಕ್ಷಗಳ ಪ್ರಗತಿ ಸಾಧಿಸಲಾಗಿರುತ್ತದೆ. (ಪೂರ್ಣ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ). ಈ 12 ಕಾಮಗಾರಿಗಳಲ್ಲಿ 7 ಕಾಮಗಾರಿಗಳು ಪೂರ್ಣಗೊಂಡಿದ್ದು, 5 ಕಾಮಗಾರಿಗಳು ಪ್ರಗತಿಯಲ್ಲಿವೆ

ಆ) ಹೊನ್ನಾವರ ತಾಲ್ಲೂಕಿನ ಏತ ನೀರಾವರಿ ಯೋಜನೆಗಳಾದ

1) ಉಳ್ಳಂಕಿ ಏತ ನೀರಾವರಿ ಯೋಜನೆಯ ರೂ: 48.00 ಲಕ್ಷದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

2) ಮಾವಿನಕುರ್ವೆ ಏತ ನೀರಾವರಿ ಯೋಜನೆ ಕಾಮಗಾರಿಗೆ ರೂ: 150.00 ಲಕ್ಷಗಳ ಅಂದಾಜು ಪಟ್ಟಿಗೆ ನಬಾರ್ಡ್‌ನ ಧನ ಸಹಾಯ ಪಡೆಯಲು ಪರಿಶೀಲಿಸಲಾಗುತ್ತಿದೆ.

3) ಜಲವಳ್ಳಿ ಹಾಗೂ ಚಿಕ್ಕನಕೋಡ ಏತ ನೀರಾವರಿ ಯೋಜನೆ ಕಾಮಗಾರಿಗಳು ಆಯವ್ಯಯದಲ್ಲಿ ಸೇರ್ಪಡೆಯಾಗಿರುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4002 ಕ್ಕೆ ಅನುಬಂಧನ

ಕ್ರಮ ಸಂಖ್ಯೆ	ತಾಲ್ಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಮಾರ್ಚ್ 03 ರವರೆಗೆ ಒಟ್ಟು ಖರ್ಚು	ಷರಾ
1)	ಭಟ್ಕಳ	ಸಣ್ಣ ಹೊಳೆ : ಬಲದಂಡೆಗೆ ಪ್ರ.ನಿ. ಕಾಮಗಾರಿ ಬೈ. 500–900,ಮೀ	10.00	0.27	ಕೆಲಸ ಮುಗಿದಿದೆ
2)	–"–	ಜಿಂಗ್ರೆ ನಾಲಾ ಸೇತುವೆ ಮೇಲ್ಭಾಗದಲ್ಲಿ ಜೈ. 0–500 ಮೀ. ಪ್ರ.ನಿ. ಕಾಮಗಾರಿ	10.00	0.29	–"–
3)	–"–	ಆಳ್ವೆಕೋಡಿ ಬಲದಂಡೆಗೆ ಪ್ರ.ನೀ. ಕಾ ಜೈ.550–950 ಮೀ	9.80	5.92	–"–
4)	–"–	ಸಣ್ಣ ಹೊಳೆ ಬಲದಂಡೆಗೆ ಶಾಪಿತ್ತು ಹತ್ತಿರ ಜೈ. 900–1350 ಮೀ	9.65	4.83	–"–